ಓ.ಎಸ್. ನಂ. **93/2020** ಪಿ.ಡಬ್ಲ್ಯೂ- **2**

<u>ಸಾಕ್ಷಿಯನ್ನು ದಿನಾಂಕ **1.10.2022** ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>

<u>ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ಪರ ವಕೀಲರಿಂದಃ</u>

ನಾನು ಹತ್ತನೇ ತರಗತಿ ಓದಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ನನ್ನ ಸ್ನೇಹಿತ ಮಾಡುತ್ತಾನೆ ಎನ್ನುವರು. ವಾದಿ ನನ್ನನ್ನು ಸಾಕ್ಷಿ ನುಡಿಯಲು ನ್ಯಾಯಾಲಯಕ್ಕೆ ಕರೆ ತಂದಿರುತ್ತಾರೆ. ನನಗೆ ವಾದಿ ಸುಮಾರು 8-10 ವರ್ಷದಿಂದ ಸ್ನೇಹಿತರು. ನಾನು ಮತ್ತು ವಾದಿ ರೈತರಿಗೆ ಹಣ ಬೇಕಾದಾಗ ಸಾಲವಾಗಿ ಹಣ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ವಾದಿಯಿಂದ 2 ಮತ್ತು 3 ನೇ ಪ್ರತಿವಾದಿ ತಂದೆಗೆ ಸಾಲವಾಗಿ ಹಣವನ್ನು ಕೊಡಿಸಿರುತ್ತೇವೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ಜಮೀನು ವ್ಯಾಪಾರ ಸಂಬಂಧ ಹಣ ನೀಡಿರುತ್ತಾರೆ ಎನ್ನುವರು. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಮಾಹಿತಿಯನ್ನು ವಾದಿ ಹೇಳಿ ಬರೆಸಿರುತ್ತಾರೆ.

ನನ್ನ ಊರು ಜಿ.ಬಿ.ಸರಗೂರು ಆಗಿರುತ್ತದೆ. 2 ಮತ್ತು 3 ನೇ ಪ್ರತಿವಾದಿ ತಂದೆ ಪಕ್ಕದ ಗ್ರಾಮವಾದ ಶಿಂಡೇನಹಳ್ಳಿ ಗ್ರಾಮದವರು ಎಂದರೆ ಸರಿ. 1 ನೇ ಪ್ರತಿವಾದಿ ಶಿರಮಹಳ್ಳಿ ಗ್ರಾಮಸ್ಥರು ಎಂದರೆ ಸರಿ. 2 ನೇ ಪ್ರತಿವಾದಿ ನಂಜನಗೂಡು ತಾಲ್ಲೂಕಿನ ಅಹಲ್ಯ ಗ್ರಾಮದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿ ನಂಜನಗೂಡು ತಾಲ್ಲೂಕಿನ ಚಂಡಿಗನಹಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ.

ದಾವಾಸ್ವತ್ತು 2 ಮತ್ತು 3 ನೇ ಪ್ರತಿವಾದಿಯ ತಂದೆಯಾದ ಸಿದ್ದೇಗೌಡರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾಸ್ವತ್ತಿನ ಮೇಲೆ ಸಿವಿಲ್ ನ್ಯಾಯಾಲಯ ಮತ್ತು ತಹಶೀಲ್ದಾರ್ ಕಛೇರಿಯಲ್ಲಿ ಕೇಸು ನಡೆಯುತ್ತಿದ್ದ ವಿಚಾರ ನನಗೆ ಗೊತ್ತಿರುತ್ತದೆ. ಸಾಕ್ಷಿ ಮುಂದುವರಿದು ಸಿದ್ದೇಗೌಡರ 2 ನೇ ಹೆಂಡತಿ ಆಕೆ ಪರ ದಾವೆ ಡಿಕ್ರಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. 2 ಮತ್ತು 3 ನೇ ಪ್ರತಿವಾದಿಗೆ ನಾವು ನ್ಯಾಯಾಲಯದ ಡಿಕ್ರಿಯಂತೆ ಖಾತೆ ಮಾಡಿಸಿಕೊಡುತ್ತೇವೆ ಎಂದು ಹೇಳಿ ನಿಪಿ1 ನ್ನು ಅಕ್ರಮವಾಗಿ ಪಡೆದುಕೊಂಡಿರುತ್ತೇವೆ ಮತ್ತು ಅವರಿಗೆ ನಂಬಿಕೆ ದ್ರೋಹ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈಗ ಸಿದ್ದೇಗೌಡ ಮತ್ತು ರವಿ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ.

ನಿಪಿ1 ನ್ನು ಹೆಚ್.ಡಿ.ಕೋಟೆಯ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಮಾಡಲಾಗಿರುತ್ತದೆ. ನಿಪಿ1 ರ ಬೆರಳಚ್ಚನ್ನು ಮೈಸೂರಿನಲ್ಲಿ ಮಾಡಲಾಗಿರುತ್ತದೆ. ನಿಪಿ1 ನ್ನು ತಯಾರು ಮಾಡಲು ಮಾಹಿತಿಯುನ್ನು ಸಿದ್ದೇಗೌಡ ಮತ್ತು ಮಾಕಮ್ಮ ರವರು ನೀಡಿರುತ್ತಾರೆ. ನಿಪಿ1 ಕ್ಕೆ ಗಿರಿ ಮತ್ತು ಮಹದೇವ ರವರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ. ಅವರನ್ನು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಸಹ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. ಸಾಕ್ಷಿಯಾಗಿ ನನ್ನನ್ನು ವಾದಿ ಬರಲು ತಿಳಿಸಿರುತ್ತಾರೆ. ನನಗೆ ಸಿದ್ದೇಗೌಡ ರವರು 25 ವರ್ಷಗಳಿಂದ ಪರಿಚಯವಿರುತ್ತಾರೆ. ನನಗೆ ಸಿದ್ದೇಗೌಡ ರವರನ್ನು ಹೊರತುಪಡಿಸಿ ಅವರ ಕುಟುಂಬದ ಬೇರೆ ಯಾರು ಪರಿಚಯವಿರುವುದಿಲ್ಲ ಎಂದರೆ ಸರಿಯಲ್ಲ.

ಮುಂಗಡ ಹಣವನ್ನು ನಗದು ಮೂಲಕ ನೀಡಲಾಗಿರುತ್ತದೆ. ವಾದಿ ಹಣವನ್ನು ನನಗೆ ನೀಡಿದಾಗ ನಾನು ಅದನ್ನು ಪ್ರತಿವಾದಿಗಳಿಗೆ ನೀಡಿರುತ್ತೇನೆ ಎಂದು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಸಾಮಾನ್ಯವಾಗಿ 20 ಸಾವಿರಕ್ಕಿಂತ ಮೇಲ್ಪಟ್ಟು ಯಾರಿಗಾದರೂ ಹಣ ನೀಡಬೇಕಾದರೆ ಚೆಕ್ ಅಥವಾ ಡಿ.ಡಿ ಮೂಲಕ ನೀಡಬೇಕು, ಆ ಕಾರಣ ವಾದಿ ಯಾವುದೇ ಮುಂಗಡ ಹಣವನ್ನು ಪ್ರತಿವಾದಿಗಳಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಮೃತ ಸಿದ್ದೇಗೌಡರಿಗೆ ಹಣ ನೀಡಿದ ಬಗ್ಗೆ ಹೇಳಿರುತ್ತೇನೆ ಎಂದರೆ ಸರಿ. 2 ಮತ್ತು 3 ನೇ ಪ್ರತಿವಾದಿಗಳಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ, ಖಾತೆಯನ್ನು ಮಾಡಿಸುತ್ತೇವೆ ಎಂದು ಹೇಳಿ ಅವರುಗಳ ಸಹಿಯನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ1 ರಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಗಂಡನ ಮನೆ ವಿಳಾಸವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರಿದು ಅವರು ಶಿರಮಹಳ್ಳಿ ವಿಳಾಸ ನೀಡಿರುತ್ತಾರೆ, ಅದರಂತೆ ಸದರಿ ವಿಳಾಸವನ್ನು ನಮೂದು ಮಾಡಲಾಗಿದೆ ಎನ್ನುವರು.

2013 ರಲ್ಲಿ ವಾದಿ ಜಮೀನು ನೋಡಲು ಬಂದಿರುತ್ತಾರೆ, ಆದರೆ ತಿಂಗಳು ಮತ್ತು ದಿನಾಂಕ ನೆನಪಿಲ್ಲ. ವಾದಿ ದಾವಾಸ್ವತ್ತನ್ನು ಖರೀದಿ ಮಾಡಲು ದಾವಾಸ್ವತ್ತನ್ನು ನೋಡಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ, ಯಾವುದೋ ಕೆಲಸದ ಮೇರೆಗೆ ಉಪನೋಂದಣಾಧಿಕಾರಿ ಕಛೇರಿಗೆ ಬಂದಾಗ ವಾದಿ ಕೋರಿಕೆ ಮೇರೆಗೆ ನಿಪಿ1 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸಂಬಂಧಪಟ್ಟಂತೆ ಒಂದು ಸಿವಿಲ್ ದಾವೆ ನಡೆಯುತ್ತಿದೆ. ನನಗೆ ನ್ಯಾಯಾಲಯದಲ್ಲಿ ಯಾವ ರೀತಿ ಸಾಕ್ಷಿ ನುಡಿಯಬೇಕೆಂದು ತಿಳಿದಿದೆ ಎಂದರೆ ಸರಿಯಲ್ಲ. ದಾವಾಸ್ವತ್ತು ಕೃಷಿ ಜಮೀನಾಗಿರುವುದಿಲ್ಲ, ಅದು ಮಾವಿನ ತೋಟವಾಗಿರುತ್ತದೆ ಎಂದರೆ ಸರಿ. ದಾವಾಸ್ವತ್ತಿನ ಸ್ವಾಧೀನ ಈಗ ಪ್ರತಿವಾದಿ ಬಳಿ ಇರುತ್ತದೆ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರಿದು ವಾದಿಗಳ ಸ್ವಾಧೀನದಲ್ಲಿದೆ ಎನ್ನುವರು. ದಾವಾಸ್ವತ್ತು ಬಗ್ಗೆ ನನಗೆ ಏನೂ ತಿಳಿಯದಿದ್ದರೂ ಸಹ ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ1 ರಲ್ಲಿ ಮಂಜುಳ ಮತ್ತು ಅವರ ಮಕ್ಕಳನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಮಂಜುಳ ರವರು ಸಹಿ ಮಾಡಿರುತ್ತಾರೆ, ಆದರೆ ಅವರ ಮಕ್ಕಳು ಮೈನರ್ ಆದ ಕಾರಣ ಸಹಿ ಮಾಡಿರುವುದಿಲ್ಲ ಎನ್ನುವರು. ನಿಪಿ1 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ಮಂಜುಳ ರವರ ಸಹಿ ಇರುವುದಿಲ್ಲ ಎಂದರೆ ಸರಿ ಎನ್ನುವರು. ದಾವಾಸ್ವತ್ತು ಪಿತ್ರಾರ್ಜಿತ ಆಸ್ತಿಯಾದ ಕಾರಣ ಮಂಜುಳ ಮತ್ತು ಅವರ ಮಕ್ಕಳಿಗೂ ಸಹ ಹಕ್ಕು ಇರುತ್ತದೆ ಎಂದರೆ ಸಾಕ್ಷಿ ನನಗೆ ಕಾನೂನು ಬಗ್ಗೆ ಗೊತ್ತಿಲ್ಲ ಎನ್ನುವರು.

ಪಾಟೀ ಸವಾಲುಃ ಪ್ರತಿವಾದಿ 6 ರಿಂದ 8 ಪರ ವಕೀಲರು ಮೇಲಿರುವ ಪಾಟೀ ಸವಾಲನ್ನೇ ಅವರ ಪರ ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಓ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.